ಶ್ರೀ ಎಂ. ನಾಗಪ್ಪ.—ಸಂಗೀತ ಮತ್ತು ನಾಟಕ ವಿಭಾಗ ಎಂದು ಹೇಳಿದ್ದರೆ. ನಾಟಕ ಕಂಪೆನಿಗಳು ಅಲ್ಲಿ ಬರುತ್ತವೇಯೇ?

ಶ್ರೀ ಎಂ. ರಾಜಶೇಖರಮೂರ್ತಿ.—ಅದಕ್ಕೆ ಪ್ರತ್ಯೇಕವಾದ ವಿಭಾಗವಿದೆ. ಅಮೆಚೂರ್ ನಂಸ್ಥೆಗಳನ್ನೂ ಅಸೋಸಿಯೇಟ್ ಮಾಡಿಕೊಳ್ಳುತ್ತೇವೆ.

Sri H. SIDDAVEERAPPA.—What is the annual expenditure of this Unit mentioned in sub-para (c)?

Sri M. RAJASEKHARA MURTHY.—I want notice.

ಶ್ರೀ ಎಂ. ಕೆ. ಬೊಮ್ಮೇಗೌಡ.—10 ವರ್ಷಗಳಲ್ಲಿ 38,086 ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದಾರೆ ಇದರಲ್ಲಿ ಏನೇನು ಸಾಧಿಸಿದ್ದಾರೆ, ಯಾವ ಯಾವ ರೀತಿ ಪ್ರಗತಿಯಾಗಿದೆ ಎಂದು ಹೇಳುತ್ತಾರೆಯೇ?

ಶ್ರೀ ಎಂ. ರಾಜಶೇಖರಮೂರ್ತಿ.—ಪ್ರೊಗ್ರೆಸ್ ಎಂದರೆ ಹತ್ತು ವರ್ಷಗಳಲ್ಲಿ ಸಾಧಿಸಿದಂಥ ಕೆಲಸವೆನ್ನಲ್ಲ ತೋರಿಸುವಂಥ ಡಾಕ್ಯುಮೆಂಟರಿ ಫಿಲಂ ತಯಾರು ಮಾಡಿದ್ದೇವೆ. ಅದಕ್ಕೆ ಇಷ್ಟು ಹಣ ಖರ್ಚಾಗಿದೆ.

Sri B. B. SAYANAK.—It is a fact that Belgaum and surrounding areas belong to Maharashtra. That is why there is no news reel for this Belgaum area; is it not?

Sri H. N. NANJE GOWDA.—I take objection to this supplementary. It is not a fact.

Mr. SPEAKER.—It is a wishful thinking on the part of the hon. Member. Everybody is entitled to hold his own opinion.

Sri B. B. SAYANAK.—We are claiming that part.

Sri M. RAJASEKHARA MURTHY.—Even with regard to that Division, we are producing a documentary.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈಗಲಾದರೂ ವಾರ್ತಾ ಇಲಾಖೆಯವರು ರಾಜಕೀಯ ಪಕ್ಷಗಳು ಮುಂದೆ ನಡೆಸತಕ್ಕ ವನ್ನು ಪ್ರದರ್ಶನಗಳಿಗೆ ಸರ್ಕಾರದಿಂದ ಅಡ್ವರ್ಟೈಸ್‌ಮೆಂಟ್ ಕೊಡತಕ್ಕುದನ್ನು ನಿಲ್ಲಿಸುತ್ತಾರೆಯೇ?

ಶ್ರೀ ಎಂ. ರಾಜಶೇಖರಮೂರ್ತಿ.—ರಾಜಕೀಯ ಪಕ್ಷಗಳು ಮಾಡುತ್ತವೆ ಎಂದು ನಿಲ್ಲಿಸುವುದಕ್ಕೆ ಹೋಗುವುದಿಲ್ಲ. ಬೆನಿಫಿಟ್ ಆದರೆ ಏಕೆ ಕೊಡಬಾರದು?

Ministers conversant with Kannada Language

126. Sri L. SRIKANTAIAH (Nanjangud).—

Will the Chief Minister be pleased to state :—

(*a*) whether all the Ministers of the present Government know to read and write Kannada Language;

(*b*) if not, the Ministers who do not know to read and write Kannada Language;

(*c*) the steps taken by the Government to make them learn to read and write Kannada Language?

Sri VEERENDRA PATIL (Chief Minister).—

(*a*) Yes ; all with the exception of three.

(*b*) (i) Minister for Transport and Tourism.
(ii) Deputy Minister for Agriculture.
(iii) Deputy Minister for Home.

(*c*) Nil.

ಶ್ರೀ ಎಲ್. ಶ್ರೀಕಂಠಯ್ಯ.—(ಸಿ) ಭಾಗಕ್ಕೆ ಉತ್ತರವಾಗಿ 'ಏನೂ ಇಲ್ಲ' ಎಂದು ಹೇಳಿದ್ದಾರೆ. ನಾನು ತಿಳಿದಂತೆ ಇವರು ಮೂರು ವರ್ಷಗಳಿಂದ ಮಂತ್ರಿಗಳಾಗಿದ್ದಾರೆ. ಪ್ರತಿ ತಿಂಗಳೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರವಾಸವನ್ನು ಕೈಗೊಳ್ಳುತ್ತಾರೆ. ಹಾಗೆ ಪ್ರವಾಸ ಹೋದಾಗ ಬಡ ರೈತರು ಅಹವಾಲನ್ನು ಕೊಡುತ್ತಾರೆ. ಆ ಅಹವಾಲನ್ನು ಸೆಕ್ರೆಟರಿಯವರಿಗೆ ಕೊಟ್ಟು ಅವರು ಏನು ಹೇಳುತ್ತಾರೆ ಅದನ್ನು ಕೇಳಿ ತಿಳಿದುಕೊಳ್ಳುತ್ತಾರೆ. ಜನರ ಕುಂದುಕೊರತೆಗಳನ್ನು ನೇರವಾಗಿ ತಿಳಿದುಕೊಳ್ಳುವುದಕ್ಕಾಗಿ ಮೂರು ವರ್ಷದಿಂದ ಕನ್ನಡ ಭಾಷೆಯನ್ನು ಓದಲು ಮತ್ತು ಬರೆಯಲು ಕಲತುಕೊಳ್ಳುವುದಕ್ಕೆ ಅಗುತ್ತಿರಲಿಲ್ಲವೇ, ಸ್ವಾಮಿ ?

† ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಓದಿ ಬರೆಯಲು ಬರುವುದಿಲ್ಲ. ಅವರಿಗೆಲ್ಲ ಕನ್ನಡ ಅರ್ಥವಾಗುತ್ತದೆ. ಕನ್ನಡದಲ್ಲಿ ಮಾತನಾಡುವುದಕ್ಕೆ ಸಾಧ್ಯವಿದೆ. ಈಗ ಇಬ್ಬರು ಉಪಮಂತ್ರಿಗಳು ಕನ್ನಡದಲ್ಲಿ ಓದುವುದಕ್ಕೆ, ಬರೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಒಬ್ಬರು ಮಂತ್ರಿಗಳು ಬಹುಶಃ ಕನ್ನಡದಲ್ಲಿ ಈಗಿನ ಅವರ ವಯಸ್ಸಿನಲ್ಲಿ ಓದುವುದು, ಬರೆಯುವುದು ಬಹಳ ಕಷ್ಟ. ಅವರಿಗೆ ಕನ್ನಡ ಅರ್ಥವಾಗುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ.—ಕನ್ನಡ ಓದುವುದಕ್ಕೆ ಬರೆಯುವುದಕ್ಕೆ ಬಂದ ಹೊರತು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳುವುದಿಲ್ಲ ಎನ್ನುವ ಭರವಸೆಯನ್ನು ಕೊಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಹೇಗೆ ಕೊಡುವುದಕ್ಕಾಗುತ್ತದೆ ?

ಶ್ರೀ ಎಂ. ನಾಗಪ್ಪ.—ನಮ್ಮ ರಾಜ್ಯದ ಭಾಷೆ ಕನ್ನಡ ಭಾಷೆ. ಆದುದರಿಂದ ಮುಂದೆ ಮಂತ್ರಿಮಂಡಲದಲ್ಲಿ ಹೆಚ್ಚು ಕನ್ನಡದಲ್ಲಿಯೇ ಕೆಲಸಕಾರ್ಯಗಳನ್ನು ಮಾಡತಕ್ಕ ಪರಿಸ್ಥಿತಿ ಬರಬಹುದು ಎನ್ನುವ ದೃಷ್ಟಿಯಿಂದ ಇವರಿಗೆಲ್ಲ ಕನ್ನಡ ವಿದ್ಯಾಭ್ಯಾಸಕ್ಕಾಗಿ ಒಂದು ಶಾಲೆ ಹಾಕಿ ಇವರಿಗೆ ವಿದ್ಯೆ ಕೊಡಲಿಕ್ಕೆ ಪ್ರಯತ್ನ ಮಾಡುತ್ತಾರೆಯೇ ಅಥವಾ ಮಂತ್ರಿಮಂಡಲದಲ್ಲಿ ಏನಾದರೂ ಬದಲಾವಣೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಕನ್ನಡ ಶಾಲೆ ತೆಗೆಯುವುದಕ್ಕೆ ಪ್ರಯತ್ನ ಮಾಡುವ ಹಾಗಿಲ್ಲ, ಮಂತ್ರಿಮಂಡಲದಲ್ಲಿ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುವ ಹಾಗೆಯೂ ಇಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ.—ಕನ್ನಡ ಬಾರದೇ ಇರತಕ್ಕ ಮೂರು ಜನ ಮಾನ್ಯ ಮುಖ್ಯ ಮಂತ್ರಿಗಳ ಉತ್ತರದ ಪ್ರಕಾರ ಮಂತ್ರಿಮಂಡಲದಲ್ಲಿದ್ದಾರೆ. ಬಹುತೇಕ ಈ ರಾಜ್ಯದಲ್ಲಿ ಕನ್ನಡ ಭಾಷೆ ಮಾತನಾಡಬೇಕು, ನಮ್ಮ ವೇಷ ಭೂಷಣಗಳಲ್ಲಿಯೂ ಕನ್ನಡವೇ ಆಗಬೇಕು ಎಂದು ಸುಮಾರು 15 ವರ್ಷದಿಂದ ಹೇಳಿಕೊಂಡು ಬಂದಿದ್ದಾರೆ. ಹೀಗಿದ್ದಾಗ್ಯೂ ಕೂಡ ಕನ್ನಡವೇ ಬಾರದೆ ಇರತಕ್ಕವರನ್ನು, ಸಾಮಾನ್ಯವಾಗಿ ನೂರಕ್ಕೆ 90 ಜನ ಕನ್ನಡ ಮಾತನಾಡುವ ಜನರಿರುವ ರಾಜ್ಯದಲ್ಲಿ ಮಂತ್ರಿಗಳಾಗಿ ನೇಮಕ ಮಾಡಿರುವುದರಿಂದ ಜನರಿಗೆ ತೊಂದರೆಯಾಗುವುದಿಲ್ಲವೆ ? ಇವರನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಈಗಾಗಲೇ ಹೇಳಿದಂತೆ ಅವರಿಗೆ ಕನ್ನಡದಲ್ಲಿ ಬರೆಯುವುದಕ್ಕೆ, ಓದುವುದಕ್ಕೆ ಬರುವುದಿಲ್ಲ. ಅವರು ಕನ್ನಡದಲ್ಲಿ ಮಾತನಾಡುತ್ತಾರೆ, ಕನ್ನಡದಲ್ಲಿ ಮಾತನಾಡಿದರೆ ಅರ್ಥವಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಕನ್ನಡ ರಾಜ್ಯ ಅನೇಕ ಭಾಷೆಗಳನ್ನೊಳಗೊಂಡ ರಾಜ್ಯವಾಗಿರುವುದರಿಂದ ಅನೇಕ ಭಾಷೆಗಳನ್ನು ಕಲತವರಿದ್ದಾರೆ. ಭರತ ಖಂಡದ ಅಭಿವೃದ್ಧಿಯ ದೃಷ್ಟಿಯಿಂದ ಆಯಾ ಭಾಷೆಯನ್ನು ಮಾತೃಭಾಷೆಯಾಗಿ ಉಳ್ಳವರು ಮಂತ್ರಿಮಂಡಲದಲ್ಲಿರುವುದು ಸಹಜವಾದಮಾರ್ಗವಲ್ಲವೇ ?

† Indicates that remarks or speeches have not been revised by the member concerned.

ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಒಂದುವೇಳೆ ಕನ್ನಡ ಕಲಯುವುದಕ್ಕೆ ಸಾಧ್ಯವಿದ್ದರೆ ಕಲಯುತ್ತಾರೆ ಮತ್ತು ಒಂದುವೇಳೆ ಅವರ ಮಾತೃಭಾಷೆ ಕನ್ನಡವಾಗಿರಾರದೆ ಇದ್ದರೆ ಕನ್ನಡ ಕಲಯಲೇ ಬೇಕು, ಕಲಯದ ವಿನಾ ಮಂತ್ರಿಯಾಗುವುದಕ್ಕೆ ಸಾಧ್ಯವಿಲ್ಲ ಎಂದು ಒತ್ತಾಯ ಹೇರುವುದು ಸಾಧುವಾದುದಲ್ಲ. ಬಾರ್ಡರ್ ಏರಿಯಾದಿಂದ ಬರುವಂಥ ಅನೇಕ ಜನರಿಗೆ ತೆಲುಗು, ಮರಾಠಿ, ತಮಿಳು ಭಾಷೆ ಬರುತ್ತದೆ. ಮೈಸೂರು ರಾಜ್ಯದಲ್ಲಿ ಮಂತ್ರಿಯಾಗಿ ಅಂಥವರೂ ಕೆಲಸ ಮಾಡುತ್ತ ಇರುತ್ತಾರೆ. ಅವರಿಗೆ ಕನ್ನಡದ ಜ್ಞಾನ ಬೇಕು. ಅವರಿಗೆ ಅಷ್ಟರಮಟ್ಟಿನ ಜ್ಞಾನವಿದೆ, ಮಾತನಾಡಲಿಕ್ಕೆ ಬರುತ್ತದೆ, ಅರ್ಥವಾಗುತ್ತದೆ. ಬರೆಯುವುದಕ್ಕೆ, ಓದುವುದಕ್ಕೆ ಬರುವುದಿಲ್ಲ.

Sri B. B. SAYANAK.—May I know since how many years the Hon. Minister for Transport and Tourism is Minister here, in Mysore State ?

Sri VEERENDRA PATIL.—He is Minister since 1967.

ಶ್ರೀ ಎಚ್. ಸಿದ್ದವೀರಪ್ಪ.—ಕನ್ನಡ ಭಾಷೆಯನ್ನು ಅವರೆಲ್ಲ ಅರ್ಥ ಮಾಡಿಕೊಳ್ಳಬೇಕಾದರೆ ಎಲ್ಲ ಭಾಗದ ಕನ್ನಡಿಗರೂ ಅರ್ಥ ಮಾಡಿಕೊಳ್ಳತಕ್ಕ ಒಂದು ಕನ್ನಡ ಭಾಷೆಯನ್ನು ಸುಲಭವಾದ ರೀತಿಯಿಂದ ಕಲಯಲಿಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲರಿಗೂ ಮಾಡಬೇಕಾಗುತ್ತದೆ; ಕೇವಲ ಮಂತ್ರಿಗಳಿಗಲ್ಲ. ಎಲ್ಲರಿಗೂ ಆ ರೀತಿಯ ವ್ಯವಸ್ಥೆ ಮಾಡಬೇಕಾಗುತ್ತದೆ.

ಶ್ರೀ ಎರ್. ಶ್ರೀಕಂಠಯ್ಯ.—ಕನ್ನಡದಲ್ಲಿ ಮಾತನಾಡುತ್ತಾರೆ ಎಂದು ಹೇಳಿದಿರಿ. ಹಾಗಾದರೆ ಕನ್ನಡದಲ್ಲಿ ಮಾತನಾಡುವುದನ್ನು ಅದರ ತಾತ್ಪರ್ಯ ಹೇಳುವುದಕ್ಕೆ ಎಕ್ಸ್‌ಪೆರಿಮೆಂಟ್ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಕನ್ನಡ ಅರ್ಥವಾಗುತ್ತದೆ. ಹಳ್ಳೇ ಮೈಸೂರು ಕನ್ನಡ ಬೇರೆ, ಬೀದರ್ ಕನ್ನಡ ಬೇರೆ, ಬೆಳಗಾಂವ ಕನ್ನಡ ಬೇರೆ ತರಹ ಆಗಿರುವುದರಿಂದ ಅವರು ಇಂಗ್ಲೀಷ್ ನಲ್ಲಿ ಹೇಳುತ್ತಾರೆ ಆದರೆ ಅವರಿಗೆ ಕನ್ನಡ ಅರ್ಥವಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಈ ಕರ್ನಾಟಕ ರಾಜ್ಯದಲ್ಲಿ ಆಡಳಿತ ಭಾಷೆ ಕನ್ನಡ ಶಿಕ್ಷಣ ಮಾಧ್ಯಮ ಕನ್ನಡ ಹೀಗೆ ಎಲ್ಲಾ ಮಟ್ಟದಲ್ಲೂ ಕನ್ನಡ ಆಗಬೇಕು ಎಂದು ಇರುವುದರಿಂದ ಮಂತ್ರಿಗಳು ಕೂಡ ಕನ್ನಡದಲ್ಲಿ ಮಾತನಾಡುವುದು ಅಪೇಕ್ಷೀ ಅವಶ್ಯಕವಾಗಿರುವುದರಿಂದ ಅವರು ಓದು ಬರೆಯುವುದಕ್ಕೆ ಕಲಯಲು ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಇದಕ್ಕೆ ಸಾಕಷ್ಟು ಉತ್ತರ ಕೊಟ್ಟಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಕನ್ನಡದಲ್ಲಿ ಕಾಗದ ಬರೆದರೆ ಅದಕ್ಕೆ ಉತ್ತರ ಕನ್ನಡದಲ್ಲಿ ಹೋಗುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಮಂತ್ರಿಗಳ ಆಫೀಸಿನಲ್ಲಿ ಪ್ರೈವೇಟ್ ಸೆಕ್ರೆಟರಿ ಇರುತ್ತಾರೆ ಸ್ಟೆನೋ ಇರುತ್ತಾರೆ. ಆದುದರಿಂದ ಕನ್ನಡದಲ್ಲಿ ಉತ್ತರ ಹೋಗುವುದಕ್ಕೆ ವ್ಯವಸ್ಥೆ ಮಾಡಲು ಸಾಧ್ಯವಿದೆ.

Formation of Roads in Pavagada Taluk

136. Sri P. ANJANAPPA (Pavagada).—

Will the Minister for Public Works be pleased to state :—

(*a*) whether the P. W. D. will take over the road from Arsikere road in Pavagada to the road joining Devalakere road *via* Naliganahalli, Paradabetta, Mugadalabetta and from it ;

(*b*) whether the P. W. D. will form the road from Bugadur in Pavagada taluk to the road going to Thirupathi *via* Appajanahalli, Ryasabehussainpura ;